ಮಂಡ್ಯ ನಗರದಲ್ಲಿ ಜನಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸ್ಮಶಾನಗಳ ಕೊರತೆ ಎದುರಾಗಿದೆ. ಮರಣಾನಂತರದ ವಿಧಿ-ವಿಧಾನಗಳು ನೆಮ್ಮದಿಯಿಂದ ನೆರವೇರಬೇಕು ಎಂಬ ಉದ್ದೇಶದಿಂದ ಸರ್ಕಾರವು ಅತ್ಯಾಧುನಿಕ ಶೈಲಿಯ ವಿದ್ಯುತ್ ಚಿತಾಗಾರವನ್ನು ತರಲು ನಿರ್ಧರಿಸಿದೆ.
● ಪಿ.ರವಿಕುಮಾರ್ ಶಾಸಕ

ಸುದ್ದಿ ಸಿಂಚನ

ಸ್ವಾತಂತ್ರ್ಯ ಹೋರಾಟಗಾರ ಹನುಮಂತಯ್ಯ ನಿಧನ

ಶ್ರೀರಂಗಪಟ್ಟಣ: ಪಟ್ಟಣದ ಗೋವಿಂದಪ್ಪ ಬೀದಿ ನಿವಾಸಿ, ಸ್ವಾತಂತ್ರ್ಯ ಹೋರಾಟಗಾರ ಹನುಮಂತಯ್ಯ (98) ಮಂಗಳವಾರ ರಾತ್ರಿ ನಿಧನರಾದರು. ಮೃತರಿಗೆ ಮೂವರು ಪುತ್ರರು, ಮೂವರು ಪುತ್ರಿಯರಿದ್ದಾರೆ.

ಬುಧವಾರ ಬಾಬುರಾಯನಕಪ್ಪಲು ಬಳಿ ಕಾವೇರಿ ನದಿ ತೀರದ ಸಾರ್ವಜನಿಕ ಸ್ಮಶಾನದಲ್ಲಿ ಪೊಲೀಸ್ ಗೌರವದೊಂದಿಗೆ ಅಂತ್ಯಕ್ರಿಯೆ ನೆರವೇರಿಸಲಾಯಿತು. ಹನುಮಂತಯ್ಯ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಪಾಲ್ಗೊಂಡಿದ್ದು, 14 ವರ್ಷದ ಬಾಲಕನಾಗಿದ್ದಾಗ ಸ್ವಾತಂತ್ರ್ಯ ಚಳವಳಿಯಲ್ಲಿ ಪಾಲ್ಗೊಂಡಿದ್ದ ಕಾರಣಕ್ಕೆ ಬಂಧನಕ್ಕೆ ಒಳಗಾಗಿದ್ದರು. 15 ದಿನಗಳ ಕಾಲ ಜೈಲು ವಾಸವನ್ನೂ ಸಹ ಅನುಭವಿಸಿದ್ದರು. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರಿಂದ ಸರ್ಕಾರದಿಂದ ಮಾಶಾಸನ ಸಹ ಬರುತ್ತಿತ್ತು ಎನ್ನಲಾಗಿದೆ. ತಾಲೂಕು ದಂಡಾಧಿಕಾರಿ ಚೇತನಯಾದವ್ ಮೃತರ ಕುಟುಂಬಕ್ಕೆ ಸಾಂತ್ವನ ಹೇಳಿ ಸರ್ಕಾರಿ ಗೌರವ ಸಲ್ಲಿಸಿದ್ದಾರೆ. ಜಿಲ್ಲಾ ಪೊಲೀಸ್ ವತಿಯಿಂದ ಶ್ರೀರಂಗಪಟ್ಟಣ ವೃತ್ತ ನಿರೀಕ್ಷಕ ಬಿ.ಜಿ.ಕುಮಾರ್ ನೇತೃತ್ವದಲ್ಲಿ ಅಂತ್ಯಕ್ರಿಯೆ ನೆರವೇರಿಸುವ ಸ್ಥಳದಲ್ಲಿ ಗಾಡ್ ಆಫ್ ಆನರ್‌ಮೂಲಕ ಗೌರವವಂದನೆ ಸಲ್ಲಿಸಿದರು.

ವೈದ್ಯ ಜ್ಞಾನ ಕೇಂದ್ರವೇ ಮಿಮ್ಸ್ ಕೇಂದ್ರ ಗ್ರಂಥಾಲಯ

ಪುಸ್ತಕ ಸಂಗ್ರಹದ ಮಿತಿ ಮೀರಿ ಕಾರ್ಯವ್ಯಾಪ್ತಿ ವಿಸ್ತರಣೆ | 15758 ವೈದ್ಯಕೀಯ ಪುಸ್ತಕಗಳು, 2600 ನರ್ಸಿಂಗ್ ಪುಸ್ತಕಗಳ ಸಂಗ್ರಹ

● **ಮಂಡ್ಯ ಮಂಜುನಾಥ**
ಕನ್ನಡಪ್ರಭ ವಾರ್ತೆ ಮಂಡ್ಯ

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕೇಂದ್ರ ಗ್ರಂಥಾಲಯ ವೈದ್ಯಕೀಯ ಶ್ರೇಷ್ಠತೆಯನ್ನು ಉತ್ತೇಜಿಸುವ ಪ್ರಮುಖ ಶಕ್ತಿ ಕೇಂದ್ರವಾಗಿದೆ. ಭವಿಷ್ಯದ ವೈದ್ಯಕೀಯ ವೃತ್ತಿಪರ ಜ್ಞಾನ ಮತ್ತು ಕೌಶಲ್ಯಗಳನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ. ವಿಶಾಲ ಸಂಪನ್ಮೂಲ ಸಂಗ್ರಹ, ಆಧುನಿಕ ಮೂಲ ಸೌಕರ್ಯ ಮತ್ತು ವಿದ್ಯಾರ್ಥಿ ಸ್ನೇಹಿ ವಾತಾವರಣದಿಂದ ಮಿಮ್ಸ್ ಗ್ರಂಥಾಲಯ ಕ್ಯಾಂಪಸ್ ಜೀವನದ ಅವಿಭಾಜ್ಯ ಅಂಗವಾಗಿ ಬೆಳೆದುಬಂದಿದೆ.

ಈ ಗ್ರಂಥಾಲಯವು ವೈದ್ಯಕೀಯ ಪುಸ್ತಕಗಳು, ಉಲ್ಲೇಖ ಗ್ರಂಥಗಳು, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಜರ್ನಲ್‌ಗಳು ಹಾಗೂ ಡಿಜಿಟಲ್ ಸಂಪನ್ಮೂಲಗಳ ವಿಶಾಲ ಸಂಗ್ರಹವನ್ನು ಹೊಂದಿದೆ. ಮೂಲಭೂತ ವಿಜ್ಞಾನಗಳಿಂದ ಹಿಡಿದು ಉನ್ನತ ಮಟ್ಟದ ಕ್ಲಿನಿಕಲ್ ಅಧ್ಯಯನಗಳವರೆಗೆ ವೈದ್ಯಕೀಯ ಶಿಕ್ಷಣದ ಬದಲಾಗುತಿರುವ ಅಗತ್ಯಗಳನ್ನು ಪೂರೈಸುವಂತೆ ಈ ಸಂಗ್ರಹವನ್ನು ಜಾಗರೂಕತೆಯಿಂದ ಆಯ್ಕೆ ಮಾಡಲಾಗಿದೆ.

2006ರಲ್ಲಿ ಗ್ರಂಥಾಲಯ ಆರಂಭ: 2006ರಲ್ಲಿ ಸಂಪನ್ಮೂಲ ಕೇಂದ್ರವಾಗಿ ಆರಂಭವಾದ ಈ ಗ್ರಂಥಾಲಯವು ಇಂದು ಹೈಬ್ರಿಡ್ ಜ್ಞಾನ ಪರಿಸರವಾಗಿ ಅಭಿವೃದ್ಧಿಹೊಂದಿದೆ. ಪುಸ್ತಕ ಸಂಗ್ರಹದ ಮಿತಿಯನ್ನು ಮೀರಿ ತನ್ನ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿದೆ. ಗ್ರಂಥಾಲಯವು ಎಂಬಿಬಿಎಸ್., ಪಿ.ಜಿ.(ಎಂಡಿ/ಎಂಎಸ್), ಬಿಎಸ್ಸಿ ನರ್ಸಿಂಗ್, ಬಿ.ಎಸ್ಸಿ ಆಲೈಡ್ ಹೆಲ್ತ್ ಸೈನ್ಸ್ ಮತ್ತು ಫ್ಯಾರಾಮೆಡಿಕಲ್ ಕೋರ್ಸಗಳ ವಿದ್ಯಾರ್ಥಿಗಳು ಮತ್ತು ಬೋಧಕ ವರ್ಗದವರ ಜ್ಞಾನ ಬೆಳವಣಿಗೆಗೂ ಸಹಕಾರಿಯಾಗಿದೆ. ಈ ಗ್ರಂಥಾಲಯದಲ್ಲಿ 8356 ಇ-ನಿಯತಕಾಲಿಕಗಳಿವೆ. ವೈದ್ಯಕೀಯ ಪುಸ್ತಕಗಳು 15758 ಮತ್ತು ನರ್ಸಿಂಗ್ ಸಂಬಂಧಿಸಿದ 2600 ಪುಸ್ತಕಗಳಿವೆ.

ಅಧ್ಯಯನಕ್ಕೆ ಪೂರಕ ವಾತಾವರಣ: ಗ್ರಂಥಾಲಯವು ಶಾಂತ ಮತ್ತು ಶಿಸ್ತುಬದ್ಧ ವಾತಾರಣದೊಂದಿಗೆ ಏಕಾಗ್ರತೆಯ ಅಧ್ಯಯನಕ್ಕೆ ಅನುಕೂಲವಾಗಿದೆ. ವಿಶಾಲವಾದ ಓದುವಕೊಠಡಿಗಳು ವಿಶಾಲವಾಗಿದ್ದು, ಉತ್ತಮ ಬೆಳಕು, ಆರಾಮದಾಯಕ ಆಸನ ವ್ಯವಸ್ಥೆಗಳಿವೆ. ವಿದ್ಯಾರ್ಥಿಗಳು ದೀರ್ಘಕಾಲ ಅಧ್ಯಯನಕ್ಕೆ ಪೂರಕ ವ್ಯವಸ್ಥೆ ಇದೆ. ಗುಂಪು ಚರ್ಚೆಗೂ ಪ್ರತ್ಯೇಕ ವಿಭಾಗಗಳಿರುವುದು ವಿದ್ಯಾರ್ಥಿಗಳ ಆಯ್ಕೆಗೆ ಪೂರಕವಾಗಿವೆ. ಗ್ರಂಥಾಲಯ ಸಿಬ್ಬಂದಿ ವಿದ್ಯಾರ್ಥಿಗಳಿಗೆ ಬೇಕಾದ ಪುಸ್ತಕಗಳನ್ನು ತೆಗೆದುಕೊಡುವಲ್ಲಿ ನೆರವಿಗೆ ಬರುತ್ತಾರೆ. ಅವರ ನೆರವಿನಿಂದ ಅಗತ್ಯ ಪುಸ್ತಕಗಳನ್ನು ಪಡೆದು ವಿಶೇಷ ಸಂಶೋಧನೆ, ಶೈಕ್ಷಣಿಕ ಯೋಜನೆಗಳಿಗೆ ಡಿಜಿಟಲ್ ಸಾಧನಗಳನ್ನು ಪರಿಣಾಮಕಾರಿಯಾಗಿ ಬಳಸುತ್ತಿದ್ದಾರೆ.

ಪರೀಕ್ಷೆ ವೇಳೆ 24 ಗಂಟೆ ಕಾರ್ಯನಿರ್ವಹಣೆ: ಪರೀಕ್ಷಾ ಸಮಯದಲ್ಲಿ ಗ್ರಂಥಾಲಯವು ದಿನದ 24 ಗಂಟೆಗಳು ಬಾಗಿಲು ತೆರೆದಿರುತ್ತದೆ. ಓದಲು ಬರುವ ವಿದ್ಯಾರ್ಥಿಗಳಿಗೆ ಭದ್ರತೆಯನ್ನೂ ಒದಗಿಸಲಾಗಿದ್ದು, ಏಕಾಗ್ರತೆಯ ಅಧ್ಯಯನ ಕೇಂದ್ರವಾಗಿಯೂ ರೂಪುಗೊಂಡಿದೆ. ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ಅನುತ್ತೀರ್ಣರಾಗುವುದನ್ನು ತಪ್ಪಿಸಲು ಗ್ರಂಥಾಲಯದಲ್ಲಿ ಬಹು ಆಯ್ಕೆ ಮಾದರಿ ಪ್ರಶ್ನೆ ಪುಸ್ತಕಗಳ ವಿಭಾಗವನ್ನು ರಾಜ್ಯದಲ್ಲಿ ಪ್ರಪ್ರಥಮವಾಗಿ ಕೇಂದ್ರ ಗ್ರಂಥಾಲಯದಲ್ಲಿ ಸ್ಥಾಪಿಸಲಾಗಿರುವುದು ಮಿಮ್ಸ್ ಸಂಸ್ಥೆಯ ಹೆಗ್ಗಳಿಕೆ ಎಂದು ಮುಖ್ಯ ಗ್ರಂಥಪಾಲಕ ಡಾ. ಅನಂತನಾಗ್ ಕನ್ನಡಪ್ರಭ ಪತ್ರಿಕೆಗೆ ತಿಳಿಸಿದರು.

ಹೆಲಿನೆಟ್ ಕನ್ಸೋರ್ಟಿಯಂ ಸಂಪರ್ಕ ಸೌಲಭ್ಯ: ಓದುಗರ ಸಮಯ ಉಳಿಸುವ ಉದ್ದೇಶದಿಂದ ಮಿಮ್ಸ್ ಗ್ರಂಥಾಲಯವು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಹೆಲಿನೆಟ್ ಕನ್ಸೋರ್ಟಿಯಂ ಸಂಪರ್ಕ ಪಡೆದು ಕೊಳ್ಳಲಾಗಿದೆ, ಈ ಕನ್ಸೋರ್ಟಿಯಂ ಮೂಲಕ ಇ-ಜರ್ನಲ್‌ಗಳು, ಇ-ಪುಸ್ತಕಗಳು ಮತ್ತು ವೈದ್ಯಕೀಯ ವಿವಿಧ ಡೇಟಾ ಬೇಸ್‌ಗಳು, ಆಪ್ ಟು ಡೇಟ್ ಆ್ಯಪ್, ಪ್ಲೇಜರಿಸಮ್ ಸಾಫ್ಟ್‌ವೇರ್, ಡ್ರಗ್ ಮಾಹಿತಿಗಳು, ಡೇಸರ್‌ಟೇಶನ್‌ಗಳು, ಪ್ರಶ್ನೆ ಪತ್ರಿಕೆಗಳನ್ನು ಆನ್‌ಲೈನ್ ಮೂಲಕ ವಿದ್ಯಾರ್ಥಿಗಳು ಮತ್ತು ಬೋಧಕ ವರ್ಗದವರು ಮೊಬೈಲ್, ಟ್ಯಾಬ್, ಲ್ಯಾಪ್ ಟಾಪ್ ಮೂಲಕ ಯಾವುದೇ ಸ್ಥಳ, ಸಮಯದಲ್ಲಾದರೂ ಪಡೆದುಕೊಳ್ಳಬಹುದು. ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಸಂಶೋಧನಾ ವಿದ್ಯಾರ್ಥಿಗಳಿಗೆ ಕೃತಿಚೌರ್ಯದ ಬಗ್ಗೆ ಅರಿವು ಮತ್ತು ಕಾರ್ಯಾಗಾರಗಳನ್ನು ನಡೆಸಲಾಗುತ್ತದೆ. ಸ್ನಾತಕೋತ್ತರ ವೈದ್ಯ ವಿದ್ಯಾರ್ಥಿಗಳ ಪ್ರಬಂಧ, ಲೇಖನಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸುವ ಮುಂಚೆ, ಗ್ರಂಥಾಲಯದಲ್ಲಿ ಕೃತಿ ಚೌರ್ಯ ಆಗಿರುವ ಬಗ್ಗೆ ಪರಿಶೀಲಿಸಲಾಗುತ್ತದೆ, ಪರಿಶೀಲಿಸಿದ ನಂತರ ಕೃತಿಚೌರ್ಯದ ಬಗ್ಗೆ ಪ್ರಮಾಣ ಪತ್ರ ನೀಡಲಾಗುತ್ತದೆ.

ಮಿಮ್ಸ್ ಕೇಂದ್ರ ಗ್ರಂಥಾಲಯದಲ್ಲಿ ವಿದ್ಯಾರ್ಥಿಗಳು ಅಧ್ಯಯನಕ್ಕೆ ಪುಸ್ತಕಗಳನ್ನು ಸಂಗ್ರಹಿಸುತ್ತಿರುವುದು (ಎಡಚಿತ್ರ), ಮಿಮ್ಸ್ ಕೇಂದ್ರ ಗ್ರಂಥಾಲಯದ ಒಳನೋಟ.

ಬೆಸ್ಟ್ ಲೈಬ್ರರಿ ಯೂಸರ್ ಅವಾರ್ಡ್

ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ತೊಡಸಿಕೊಳ್ಳುವಿಕೆಯನ್ನು ಉತ್ತೇಜಿಸಲು ಮಿಮ್ಸ್ ಗ್ರಂಥಾಲಯವು ಬೆಸ್ಟ್ ಲೈಬ್ರರಿ ಯೂಸರ್ ಅವಾರ್ಡ್‌ನ್ನು ಪ್ರಾರಂಭಿಸಿದೆ. ಗ್ರಂಥಾಲಯವನ್ನು ಪರಿಣಾಮಕಾರಿಯಾಗಿ ಬಳಸುವ ವಿದ್ಯಾರ್ಥಿಗಳನ್ನು ಗುರುತಿಸಿ 2026ನೇ ಸಾಲಿನಿಂದ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ, ಈ ಮೂಲಕ ಸ್ಪರ್ಧಾತ್ಮಕ ಅಧ್ಯಯನ ಸಂಸ್ಕೃತಿಯನ್ನು ಉತ್ತೇಜಿಸಲಾಗುತ್ತಿದೆ.

ಮಿಮ್ಸ್ ಕೇಂದ್ರ ಗ್ರಂಥಾಲಯ ಜಾಗತಿಕ ಜ್ಞಾನಕ್ಕೆ ಪ್ರವೇಶ ಒದಗಿಸುವ ಮೂಲಕ ವಿದ್ಯಾರ್ಥಿಗಳು ಹೆಚ್ಚು ಸಾಹಿತ್ಯ ವಿಮರ್ಶೆಗಳು ಮತ್ತು ಸಂಶೋಧನಾ ಅಧ್ಯಯನಗಳನ್ನು ನಡೆಸಲು ನೆರವಾಗಿದೆ. ಕ್ಯಾಂಪಸ್ ಹೊರಗೆ ಮತ್ತು ಒಳಗೂ ಇದರ ಉಪಯೋಗ ಪಡೆದುಕೊಳ್ಳಲು ವಿದ್ಯಾರ್ಥಿಗಳಿಗೆ ನೋಂದಣಿ ಮೂಲಕ ವ್ಯವಸ್ಥೆ ಮಾಡಿಕೊಡಲಾಗಿದೆ.
● **ಡಾ.ಪಿ.ನರಸಿಂಹಸ್ವಾಮಿ**
ನಿರ್ದೇಶಕರು, ಮಿಮ್ಸ್, ಮಂಡ್ಯ

ವೈದ್ಯಕೀಯ ಶಿಕ್ಷಣ ನಿರಂತರವಾಗಿ ಬದಲಾಗುತ್ತಿರುವ ಈ ಕಾಲದಲ್ಲಿ ಮಿಮ್ಸ್ ಗ್ರಂಥಾಲಯವು ತನ್ನ ಸಂಪನ್ಮೂಲಗಳನ್ನು ವಿಸ್ತರಿಸಿ ಮತ್ತು ಸುಧಾರಿಸಿ ಮುಂದುವರೆಯುತ್ತಿದೆ. ಸಾಮರ್ಥ್ಯವಂತ ಮತ್ತು ಆರೋಗ್ಯ ಸೇವಾ ವೃತ್ತಿಪರರನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ.
● **ಡಾ.ಕೆ.ಅನಂತನಾಗ್** ಮುಖ್ಯ ಗ್ರಂಥಪಾಲಕರು, ಮಿಮ್ಸ್, ಮಂಡ್ಯ

27-28ಕ್ಕೆ ಜಿಲ್ಲಾ ಲೇಖಕಿಯರ ಸಮ್ಮೇಳನ

ಸರ್ವಾಧ್ಯಕ್ಷರಾಗಿ ಡಾ.ಟಿ.ಸಿ.ಪೂರ್ಣಿಮಾ ಆಯ್ಕೆ: ಮೀರಾ | ರೈತಸಭಾಂಗಣದಿಂದ ಅಂಬೇಡ್ಕರ್ ಭವನದವರೆಗೆ ಮೆರವಣಿಗೆ

ಮಂಡ್ಯದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಲೇಖಕಿಯರ ಸಂಘದ ಅಧ್ಯಕ್ಷ ಡಾ. ಮೀರಾ ಶಿವಲಿಂಗಯ್ಯ ಮಾತನಾಡಿದರು.

● **ಕನ್ನಡಪ್ರಭ ವಾರ್ತೆ** ಮಂಡ್ಯ

ಕರ್ನಾಟಕ ಲೇಖಕಿಯರ ಸಂಘ ಬೆಂಗಳೂರು ಮತ್ತು ಜಿಲ್ಲಾ ಘಟಕದ ಸಹಯೋಗದೊಂದಿಗೆ ಜೂ.27 ಹಾಗೂ 28ರಂದು ಜಿಲ್ಲಾ ಲೇಖಕಿಯರ ಸಮ್ಮೇಳನ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಆಯೋಜಿಸಲಾಗಿದೆ ಎಂದು ಜಿಲ್ಲಾ ಘಟಕದ ಅಧ್ಯಕ್ಷೆ ಡಾ.ಮೀರಾ ಶಿವಲಿಂಗಯ್ಯ ಹೇಳಿದರು.

ಸಮ್ಮೇಳನದ ಸರ್ವಾಧ್ಯಕ್ಷರಾಗಿ ಡಾ.ಟಿ.ಸಿ.ಪೂರ್ಣಿಮಾ ಆಯ್ಕೆಯಾಗಿದ್ದಾರೆ. ಅಧ್ಯಕ್ಷರನ್ನು ರೈತಸಭಾಂಗಣದಿಂದ ಅಂಬೇಡ್ಕರ್‌ಭವನದವರೆಗೆ ಮೆರವಣಿಗೆಯಲ್ಲಿ ಕರೆತರಲಾಗುವುದು. ಸಮ್ಮೇಳನದ ಉದ್ಘಾಟನೆಯನ್ನು ವಿಶ್ರಾಂತ ಕುಲಪತಿ ಡಾ.ಪದ್ಮಾ ಶೇಖರ್ ನೆರವೇರಿಸುವರು. ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಡಾ.ಆರ್. ಸುನಂದಮ್ಮ ಆಶಯ ನುಡಿಗಳನ್ನಾಡುವರು. ಸ್ಮರಣ ಸಂಚಿಕೆಯನ್ನು ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಆರ್.ನಂದಿನಿ ಬಿಡುಗಡೆ ಮಾಡುವರು ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸ್ಮರಣ ಸಂಚಿಕೆ ಕುರಿತು ಸಂಪಾದಕಿ ಡಾ.ಸಬಿಹಾ ಭೂಮಿಗೌಡ ಮಾತನಾಡುವರು. ಮಹಿಳೆಯರ ಆಶಯ, ಆಲೋಚನೆ, ಪ್ರಸ್ತುತ ಸಮಾಜದಲ್ಲಿ ಮಹಿಳೆಯ ಪಾತ್ರ, ಆಕೆ ಎದುರಿಸುತ್ತಿರುವ ಸಮಸ್ಯೆಗಳನ್ನು ಪ್ರತಿಧ್ವನಿಸುವ ಪ್ರತಿನಿಧಿಯಾಗಿ ಚಿಂತಿಸುವ ಕುರಿತು ಬೆಳಕು ಚೆಲ್ಲುವಂತಹ ಗೋಷ್ಠಿಗಳನ್ನು ಆಯೋಜಿಸಲಾಗಿದೆ ಎಂದರು.

ಜೂ.27ರಂದು ಕಾವ್ಯ ಸಮಯ ಗೋಷ್ಠಿಯಲ್ಲಿ ಹಲವು ಕವಯಿತ್ರಿಯರು ಭಾಗವಹಿಸುವರು. ಮಹಿಳಾ ಅವಶ್ಯಕತೆಗಳು, ಸಿನಿಮ ರಂಗಭೂಮಿ, ರಾಜಕೀಯ ಮತ್ತು ಸಾಹಿತ್ಯ ಕ್ಷೇತ್ರದ ಮಹಿಳೆಯರ ಆತ್ಮಕತೆಗಳ ಬಗ್ಗೆ ಮಂಥನವಿರುತ್ತದೆ. ಕವಿಗೋಷ್ಠಿಯನ್ನು ಆಯೋಜಿಸಿದ್ದು ಇದರ ಉದ್ಘಾಟನೆಯನ್ನು ವಿಶ್ರಾಂತ ಪ್ರಾಂಶುಪಾಲೆ ಡಾ.ಲೀಲಾ ಅಪ್ಪಾಜಿ ನೆರವೇರಿಸುವರು. ಹಿರಿಯ ಲೇಖಕಿ ಡಾ.ಕೆ.ಷರೀಫಾ ಅಧ್ಯಕ್ಷತೆ ವಹಿಸುವರು. ಈ ಗೋಷ್ಠಿಯಲ್ಲಿ ನಾಡಿನ ಹಲವಾರು ಕವಯಿತ್ರಿಯರು ಭಾಗವಹಿಸುವರು. ಸಂಜೆ 6.30ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ ಎಂದು ನುಡಿದರು.

ಜೂ.28ರಂದು ಸಮಕಾಲೀನ ತಲ್ಲಣಗಳು ವಿಷಯದಡಿ ಹದಿಹರೆಯದ ಹೆಣ್ಣುಮಕ್ಕಳ ಸಮಸ್ಯೆಗಳು ಹಾಗೂ ಸಾಮಾಜಿಕ ಸಮಸ್ಯೆಯಾಗಿ ಭ್ರೂಣಹತ್ಯೆ, ಸಣ್ಣ ಕೈಗಾರಿಕೋದ್ಯಮಗಳಲ್ಲಿ ಮಹಿಳೆಯರ ಸಮಸ್ಯೆಗಳು, 21ನೇ ಶತಮಾನದ ಮಹಿಳಾ ಸಾಹಿತ್ಯ ವಿಷಯದಡಿ ಕಾದಂಬರಿಗಳು, ಸಣ್ಣಕತೆಗಳು, ಪ್ರವಾಸಿ ಸಾಹಿತ್ಯದ ಬಗ್ಗೆ ನಾಡಿನ ಹೆಸರಾಂತ ಲೇಖಕಿಯರು ವಿಷಯ ಮಂಡನೆ ಮಾಡುವರು. ಸಮಾರೋಪ ಭಾಷಣವನ್ನು ಹಿರಿಯ ಸಾಹಿತಿ ಡಾ.ಲತಾರಾಜಶೇಖರ್ ಮಾಡುವರು. ಹಲವಾರು ಕ್ಷೇತ್ರಗಳಲ್ಲಿ ಸಾಧನೆಗೈದ ನಾಡಿನ ಮಹಿಳೆಯರನ್ನು ಗೌರಿಸಲಾಗುವುದು ಎಂದರು.

ಗೋಷ್ಠಿಯಲ್ಲಿ ಡಾ.ಅನಸೂಯ ಹೊಂಬಾಳೆ, ಡಾ.ಆರ್.ಸುನಂದಮ್ಮ, ಡಾ.ಎಸ್.ಸಿ.ಮಂಗಳಾ, ಡಾ.ಎಂ. ಕೆಂಪಮ್ಮ, ಡಾ.ಸುಮಾರಾಣಿ ಇದ್ದರು.

ಡಾ.ಟಿ.ಸಿ.ಪೂರ್ಣಿಮಾ ಪರಿಚಯ

ಮೈಸೂರಿನ ಪ್ರತಿಷ್ಠಿತ ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜಿನ ಆಡಳಿತಾಧಿಕಾರಿಯಾಗಿರುವ ಡಾ.ಟಿ.ಸಿ.ಪೂರ್ಣಿಮಾ ನಿವೃತ್ತ ಐಎಎಸ್ ಅಧಿಕಾರಿಯಾಗಿದ್ದಾರೆ. ಸಾಹಿತಿಯಾಗಿ, ಮಾಧ್ಯಮ ತಜ್ಞರಾಗಿ, ಸಾಂಸ್ಕೃತಿಕ ರಾಯಭಾರಿಯಾಗಿ ಕನ್ನಡ ಸಾರಸ್ವತ ಲೋಕಕ್ಕೆ ಚಿರಪರಿಚಿತರು. ಮೂಲತಃ ಮೈಸೂರಿನವರಾದ ಪೂರ್ಣಿಮಾ ಅವರು ಬಿಎಸ್ಸಿ, ಕನ್ನಡ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ, ಸಂವಹನ ಕ್ಷೇತ್ರದಲ್ಲಿ ಪಿಹೆಚ್‌ಡಿ, ಪ್ರದರ್ಶಕ ಕಲೆಗಳ ವಿಷಯದಲ್ಲಿ ಡಿ-ಲಿಟ್‌ಪದವಿ, ಪತ್ರಿಕೋದ್ಯಮದಲ್ಲಿ ಡಿಪ್ಲೋಮಾ, ಹಿಂದಿ ಭಾಷಾ ಪರಿಣಿತ ಪದವಿ ರಾಷ್ಟ್ರಭಾಷಾ ವ್ಯಾಸಂಗ ಮಾಡಿದ್ದಾರೆ. ಪಿಟೀಲು ವಿದ್ವಾಂಸ ಪಿಟೀಲು ಚೌಡಯ್ಯನವರ ವಂಶಸ್ಥರು. ಪ್ರಸ್ತುತ ಪಾಂಡವಪುರ ತಾಲೂಕು ಕ್ಯಾತನಹಳ್ಳಿಯಲ್ಲಿ ನೆಲೆಸಿದ್ದಾರೆ. ಕನ್ನಡದ ಮಣ್ಣಿನಿಂದ ಕೇಂದ್ರ ವಾರ್ತಾ ಸೇವೆಗೆ ಯುಪಿಎಸ್ಸಿ ಮೂಲಕ ಆಯ್ಕೆಗೊಂಡ ಮೊದಲ ಮಹಿಳಾ ನಾಗರಿಕ ಸೇವಾ ಅಧಿಕಾರಿ. ಕರ್ನಾಟಕದ ಮೂವರು ಮುಖ್ಯಮಂತ್ರಿಗಳಿಗೆ ಮಾಧ್ಯಮ ವಿಶೇಷ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಸಾಹಿತಿಯಾಗಿ ಕುವೆಂಪು ಸಾಹಿತ್ಯ ಸಂಶೋಧನೆ ದಿಟದ ಮನೆ, ಪಿಟೀಲು ಚೌಡಯ್ಯನವರನ್ನು ಕುರಿತ ನಾದ ನಕ್ಷತ್ರ, ಆಧುನಿಕ ಸಂವಹನ ಮಾಧ್ಯಮಗಳು ಮತ್ತು ಕನ್ನಡದ ಅಭಿವೃದ್ಧಿ ಮೊದಲಾದ 25ಕ್ಕೂ ಹೆಚ್ಚು ಪುಸ್ತಕಗಳನ್ನು ರಚಿಸಿದ್ದಾರೆ.

₹4 ಕೋಟಿ ವೆಚ್ಚದ ವಿದ್ಯುತ್ ಚಿತಾಗಾರಕ್ಕೆ ಭೂಮಿ ಪೂಜೆ

● **ಕನ್ನಡಪ್ರಭ ವಾರ್ತೆ** ಮಂಡ್ಯ

ನಗರದ ಕಲ್ಲಹಳ್ಳಿ ಸ್ಮಶಾನದಲ್ಲಿ ಪೌರಾಡಳಿತ ನಿರ್ದೇಶನಾಲಯ ಮತ್ತು ನಗರ ಸಭೆ ಸಹಯೋಗದಲ್ಲಿ ಯುಐಡಿಎಫ್ ಮತ್ತು ನಗರಸಭೆ ಅನುದಾನದಲ್ಲಿ 4 ಕೋಟಿ ರು. ವೆಚ್ಚದಲ್ಲಿ ನಿರ್ಮಾಣಗೊಳ್ಳಲಿರುವ ಅತ್ಯಾಧುನಿಕ ವಿದ್ಯುತ್ ಚಿತಾಗಾರ ಕಾಮಗಾರಿಗೆ ಶಾಸಕ ಪಿ. ರವಿಕುಮಾರ್ ಬುಧವಾರ ಭೂಮಿ ಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ವಿಶೇಷ ಅನುದಾನದಡಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದ್ದು, ಒಂದು ವರ್ಷದೊಳಗೆ ಕಾಮಗಾರಿ ಪೂರ್ಣಗೊಳಿಸಿ ಕಾರ್ಯಾಚರಣೆ ಆರಂಭಿಸುವ ಗುರಿ ಹೊಂದಲಾಗಿದೆ ಎಂದರು.

ನಗರದಲ್ಲಿ ಜನಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸ್ಮಶಾನಗಳ ಕೊರತೆ ಎದುರಾಗಿದೆ. ಮರಣಾನಂತರದ ವಿಧಿ-ವಿಧಾನಗಳು ನೆಮ್ಮದಿಯಿಂದ ನೆರವೇರಬೇಕು ಎಂಬ